

# ಕೋವಿಡ್–19
## ಕರೋನಾ ವೈರಸ್

# ಪ್ರಶ್ನೆಗಳು ಮತ್ತು ಉತ್ತರಗಳು

| | | |
|---|---|---|
| ಕರೋನಾ ವೈರಸ್ ಹರಡುವಿಕೆಯನ್ನು ಮಾಸ್ಕ್ ಧರಿಸುವುದರಿಂದ ತಡೆಗಟ್ಟಬಹುದೇ? |  | ಕೋವಿಡ್–19 ಗುಣಲಕ್ಷಣಗಳಾದ ಶೀತ, ಕೆಮ್ಮು, ಉಸಿರಾಟದ ತೊಂದರೆ ಮತ್ತು ಜ್ವರದಿಂದ ಬಳಲುತ್ತಿರುವವರು ಆರೋಗ್ಯ ಸೇವೆ ನೀಡುವವರು ಸೋಂಕಿನ ವ್ಯಕ್ತಿಯೊಡನೆ ಸಂಪರ್ಕದಲ್ಲಿರುವವರು ಮಾಸ್ಕ್ ಧರಿಸಬೇಕು.ಇದರಿಂದ ಕರೋನಾ ವೈರಸ್ ಹರಡುವಿಕೆಯನ್ನು ತಡೆಗಟ್ಟಬಹುದು. |
| ಕರೋನಾ ವೈರಸ್ ಹರಡುವಿಕೆಯನ್ನು ತಡೆಗಟ್ಟಲು ಮಾಂಸವನ್ನು ತ್ಯಜಿಸಬೇಕೇ? |  | ಮಾಂಸ ಆಹಾರ ಸೇವನೆಗೂ ಕರೋನಾ ವೈರಸ್ ಹರಡುವಿಕೆಗೂ ಸಂಬಂಧವಿಲ್ಲ |
| ಕೋವಿಡ್–19 ಗೆ ಎಷ್ಟು ಬೇಗ ಲಸಿಕೆಯನ್ನು ಕಂಡುಹಿಡಿಯಬಹುದು ? |  | ಕರೋನಾ ವೈರಸ್‌ಗೆ ಲಸಿಕೆಯನ್ನು ಅಭಿವೃದ್ಧಿ ಪಡಿಸುವ ಕಾರ್ಯ ಪ್ರಗತಿಯಲ್ಲಿದ್ದು ಇನ್ನೊಂದು ವರ್ಷದಲ್ಲಿ ಕಂಡುಹಿಡಿಯಬಹುದು. |
| ನನಗೆ ರೋಗ ಲಕ್ಷಣಗಳಿದ್ದರೆ ನಾನು ನೇರವಾಗಿ ಆಸ್ಪತ್ರೆಗೆ ಹೋಗಬೇಕೇ ? |  | ರೋಗ ಲಕ್ಷಣಗಳು ಕಂಡುಬಂದಲ್ಲಿ ವೈದ್ಯರನ್ನು ಭೇಟಿಯಾಗುವ ಮೊದಲು 104 ಉಚಿತ ಸಹಾಯವಾಣಿಗೆ ಕರೆ ಮಾಡಿ |
| ಕೋವಿಡ್–19 ಚಿಕಿತ್ಸೆ ನೀಡಲು ಮನೆ ಮದ್ದುಗಳು ಇವೆಯೇ ? |  | ಅಲೋಪತಿ ಔಷಧಿ ಹೊರತುಪಡಿಸಿ ಬೇರೆ ಯಾವುದೇ ಮನೆ ಔಷಧಿಗಳು ಈ ಸೋಂಕನ್ನು ಗುಣಪಡಿಸಿದ ಆಧಾರಗಳಿಲ್ಲ, ಮುಂಜಾಗ್ರತೆ ಕ್ರಮಗಳನ್ನು ಅನುಸರಿಸುವುದೊಂದೇ ಮಾರ್ಗ |
| ಕೋವಿಡ್–19 ವೈರಸ್ ಬಿಸಿ ಮತ್ತು ಆದ್ರತೆಯ ವಾತಾವರಣದಲ್ಲಿ ಹರಡುತ್ತದೆಯೇ ? |  | ಹೌದು– ಇಲ್ಲಿಯವರೆಗೆ ಕೋವಿಡ್–19 ಬಿಸಿ ಮತ್ತು ಆದ್ರತೆಯ ವಾತಾವರಣಒಳಗೊಂಡಂತೆ ಎಲ್ಲಾ ವಾತಾವರಣಗಳಲ್ಲಿಯೂ ಹರಡುತ್ತದೆ. |

ಬಿಸಿ ನೀರಿನಿಂದ ಸ್ನಾನ ಮಾಡುವುದರಿಂದ ಕರೋನಾ ವೈರಸ್ ತಡೆಗಟ್ಟಬಹುದೇ ?



ಬಿಸಿ ನೀರು ಸ್ನಾನದಿಂದ ಕರೋನಾ ವೈರಸ್‌ನ್ನು ತಡೆಯಲಾಗುವುದಿಲ್ಲ

ನಿಮೋನಿಯ ರೋಗಕ್ಕೆ ನೀಡಲಾಗುವ ಲಸಿಕೆಯನ್ನು, ಕರೋನಾ ವೈರಸ್ ವಿರುದ್ಧ ರಕ್ಷಣೆಗೆ ನೀಡಬಹುದೇ ?



ಇಲ್ಲ – ನಿಮೋನಿಯ ಲಸಿಕೆಯು ಕೋವಿಡ್–19ಗೆ ಪರಿಹಾರ ಚಿಕಿತ್ಸೆ ಅಲ್ಲ

ನಿಮ್ಮ ದೇಹದ ಮೇಲೆ ಆಲ್ಕೋಹಾಲ್ ಅಥವಾ ಕ್ಲೋರಿನ್ ಸಿಂಪಡಿಸುವುದರಿಂದ ಕರೋನಾ ವೈರಸ್ ಸಾಯುತ್ತದೆಯೇ ?



ಇಲ್ಲ – ದೇಹದ ಮೇಲೆ ಆಲ್ಕೋಹಾಲ್ ಅಥವಾ ಕ್ಲೋರಿನ್ ಸಿಂಪಡಿಸುವುದರಿಂದ ಕರೋನಾ ವೈರಸ್ ಸಾಯುವುದಿಲ್ಲ.

ಕರೋನಾ ವೈರಸ್ ನಿಯಂತ್ರಿಸಲು ನಿರ್ಧಿಷ್ಟ ಔಷಧಿಗಳಿದೆಯೇ ?



ಇಲ್ಲಿಯವರೆಗೆ ನಿರ್ಧಿಷ್ಟ ಔಷಧಿ ಲಭ್ಯವಿಲ್ಲ ಸೋಂಕಿತರಿಗೆ ಲಕ್ಷಣಾಧಾರಿತ ಚಿಕಿತ್ಸೆಯನ್ನು ನೀಡುವುದರ ಮೂಲಕ ಅವರ ಆರೈಕೆಯನ್ನು ಮಾಡಲಾಗುತ್ತದೆ.

ಕರೋನಾ ವೈರಸ್ ಸೊಳ್ಳೆಗಳಿಂದ ಹರುಡುತ್ತದೆಯೇ ?



ಇಲ್ಲ – ಸೊಳ್ಳೆಗಳಿಂದ ಕರೋನಾ ವೈರಸ್ ಹರಡುವುದಿಲ್ಲ

ಬೆಳ್ಳುಳ್ಳಿ ಸೇವನೆಯಿಂದ ಕರೋನಾ ವೈರಸ್ ತಡಗಟ್ಟಬಹುದೇ ?



ಬೆಳ್ಳುಳ್ಳಿ ಸೇವನೆಯಿಂದ ಕರೋನಾ ವೈರಸ್ ತಡೆಗಟ್ಟಿದ ಬಗ್ಗೆ ಯಾವುದೇ ಆಧಾರವಿಲ್ಲ

ಕರೋನಾ ವೈರಸ್‌ಗೆ ಚಿಕಿತ್ಸೆಯಲ್ಲಿ ಅಂಟಿಬಯೋಟಿಕ್ಸ್ ಪರಿಣಾಮಕಾರಿಯೇ ?



ಇಲ್ಲ – ಯಾವುದೇ ಅಂಟಿಬಯೋಟಿಕ್ಸ್ ಗಳು ವೈರಸ್ ವಿರುದ್ದ ಕೆಲಸ ಮಾಡುವುದಿಲ್ಲ ಅವು ಕೇವಲ ಬ್ಯಾಕ್ಟೀರಿಯಾ ವಿರುದ್ದ ಹೋರಾಡುತ್ತವೆ.

ಕರೋನಾ ವೈರಸ್ ವಯಸ್ಸಾದವರಿಗೆ ಹೆಚ್ಚು ತೊಂದರೆ ಕೊಡುವುದೋ ಅಥವಾ ಯುವಕರು ಕೂಡ ಸೋಂಕಿಗೆ ಒಳಗಾಗಬಹುದೇ ?



ಎಲ್ಲಾ ವಯೋಮಾನದವರಿಗೂ ಕರೋನಾ ವೈರಸ್ ಹರಡಬಹುದು. ಮಕ್ಕಳು, ವಯಸ್ಸಾದವರು, ಧೀರ್ಘಾವಧಿಕಾಯಿಲೆ ಇರುವವರು ಮತ್ತು ಬೇರೆ ಯಾವುದೇ ಕಾಯಿಲೆಯಿಂದ ಬಾಧಿತರಾದವರು ಈ ಸೋಂಕಿಗೆ ಬೇಗ ತುತ್ತಾಗುವ ಸಾಧ್ಯತೆ ಹೆಚ್ಚಿದ್ದು ಗುಣಮುಖರಾಗಲು ಹೆಚ್ಚಿನ ಸಮಯ ಹಿಡಿಯಬಹುದು.

**ಹೆಚ್ಚಿನ ಮಾಹಿತಿಗಾಗಿ– 24/7 ಉಚಿತ ಆರೋಗ್ಯ ಸಹಾಯವಾಣಿ 104ಕ್ಕೆ ಅಥವಾ 080–46848600, 080–66692000ಕ್ಕೆ ಕರೆ ಮಾಡಿ**

NIRDPR | CRU Communication Resource Unit – A joint initiative of NIRDPR & UNICEF | World Health Organization India | unicef for every child